ಐರಿನಾ ಶುವಾಲೊವಾ ಅವರ
ಎರಡು ಕವಿತೆಗಳು

# ಒಂದು ಹಕ್ಕಿ

ದಿನವಿಡೀ ನಾನು
ನಿನ್ನ ಹೆಸರನ್ನು
ಯಾರಿಗೂ ಕೇಳಿಸದಂತೆ
ನನ್ನ ನಾಲಿಗೆಯ ತುದಿ ಮೇಲೆ
ಇಟ್ಟುಕೊಂಡು ಓಡಾಡುತ್ತೇನೆ

ಇಪ್ಪತ್ತು ದಿನಗಳಿಂದ
ಯಾವ ಊರಿನ ಮನೆಗಳಲಿ
ಒಪ್ಪೊತ್ತು ದೀಪಗಳೂ ಬೆಳಗುತ್ತಿಲ್ಲವೋ
ಆ ನತದೃಷ್ಟ ಶಹರದದ ಮೇಲಿಂದ
ಪಟಪಟನೆ ರೆಕ್ಕೆ ಬಡಿಯುತ್ತಾ
ತಪ್ಪಿಸಿಕೊಂಡು ಹಾರಿ ಹೋದೀತೆಂದು
ಅದನ್ನು ಗಟ್ಟಿಯಾಗಿ ಉಚ್ಛರಿಸಲು ಸಹ
ಹೆದರುತ್ತೇನೆ

ಒಂದು ಸಣ್ಣ ಹಕ್ಕಿ
ಅದರ ಧ್ವನಿ ಕಡುಗೆಂಪು

ಒಂದು ಸಣ್ಣ ಹಕ್ಕಿ
ಅದರ ಕೊಕ್ಕಿನಲ್ಲಿ ಶೋಕದ ಕಹಿ ಬೀಜ

ನಕ್ಷತ್ರ, ಧೂಮಕೇತು ಮಿಸ್ಸೈಲುಗಳ ನಡುವೆ
ದಿಕ್ಕೆಟ್ಟು ನಿಂತ ಅದರ ಪಥ ಯಾವುದೋ ನಿಜಕ್ಕೂ
ತಿಳಿಯುತ್ತಿಲ್ಲ

ಒಂದು ವೇಳೆ ಆ ಹಕ್ಕಿ
ಮೈ ಮರೆತು ಬೀಜವ ಚೆಲ್ಲಿ ಬಿಟ್ಟರೆ

ಗಾಯಗೊಂಡ ಈ ನೆಲದ ಮೇಲೆ
ಖಂಡಿತ ಅದು ಬೆಳೆಯಲಿದೆ
ಪ್ರೀತಿಯ ಹೆಮ್ಮರವಾಗಿ

# ಬರೆಯಲಾರ ಕವಿಯೊಬ್ಬ ಯುದ್ಧದ ಕುರಿತು

ಬಲಿಪಶುವಲ್ಲ
ಭಾಗಿದಾರನೂ ಅಲ್ಲ
ರಕ್ಷಕನಲ್ಲ
ವೀಕ್ಷಕನೂ ಅಲ್ಲ
ಹೊರಗಿನವನಂತೂ ಅಲ್ಲವೇ ಅಲ್ಲ
ಯಾರು ಹಾಗಾದರೆ
ಎಲ್ಲರಿಗೂ ಒಂದೊಂದು ಪಾತ್ರ ನೀಡಿದೆ ಯುದ್ಧ
ನಿನ್ನ ಪಾತ್ರವೇನು?
ನಿನ್ನ ಬಾಯಿಯನ್ನ ನಿನ್ನದೇ ಅಂಗೈಯಿಂದ ಮುಚ್ಚಿ
ಬೀಗ ಜಡಿಯುವುದೇ?
ಬರಿ..
ಬೇಗ ಬೇಗ ಬರಿ..
ನಮ್ಮ ಮಿಸ್‌ಗೆ ನಾಲಿಗೆತೊಡರು
ಈಗ ಬಾಯಿ ಬಿಡುವ ಸಮಯ ಬಂದಿದೆ
ಗುಕ್ಕುತ್ತಿದ್ದಾಳೆ
ಇದ್ದಕ್ಕಿದ್ದಂತೆ ಮೌನಕ್ಕೂ ಜಾರುತ್ತಾಳೆ
ಆದರೆ
ನೀನು ತಾನೆ ಏನು ಹೇಳೋಕೆ ಸಾಧ್ಯ
ಎಲ್ಲರೂ ಎಲ್ಲಾ ದಿಕ್ಕಿನಿಂದ ಒಂದೇ ಸವನೆ
ಬೊಬ್ಬೆ ಹೊಡೆಯುತ್ತಿರುವಾಗ
ಸೈರನ್‌ಗಳು ಕಿರುಚುತ್ತಿವೆ
ಹೊಗೆ ಮೇಲ ಮೇಲಕ್ಕೆ ಏಳುತ್ತಿದೆ
ರಬ್ಬರ್ ಟೈಯರ್‌ಗಳು ಕಿರುಗುಡುತ್ತಿವೆ
ಒಡೆದ ಕಿಟಕಿಗಳ ವಕ್ರ ಬಾಯಿಗಳು
ಹತಾಶವಾಗಿ ಗೂ ಗುಡುತ್ತಿವೆ
ಅವಳು ನಿನಗೆ ಸಂದೇಶ ಕಳುಹಿಸುತ್ತಾಳೆ
'ಇಲ್ಲೇ ಹತ್ತಿರದಲ್ಲೇ ಕೇಳಿಸುತ್ತಿದೆ ಆಸ್ಫೋಟದ ಸದ್ದು,
ಹಾರುತ್ತಿವೆ ನೆತ್ತಿಯ ಮೇಲೆ ಯುದ್ಧ ವಿಮಾನಗಳು'
ಕೊನೆಗೂ ಹೇಗೆ ಪ್ರತಿಕ್ರಿಯಿಸಬೇಕೆಂದು ತಿಳಿಯದೇ
ಸುಮ್ಮನಾಗುತ್ತೀಯ ನೀನು
ಕೆಲವೇ ಕೆಲವರನ್ನು ಬಿಟ್ಟು
ಬಹುತೇಕರಿಗೆ ಯುದ್ಧ
ಕಾಲ್ಪನಿಕ ವಿಷಯ ಗೊತ್ತಾ?